# ಬೈಗಾ ಬುಡಕಟ್ಟು (BAIGA TRIBE)



**ಇತ್ತೀಚೆಗೆ ಸುದ್ದಿಯಲ್ಲಿದೆ:**

- ಛತ್ತೀಸ್‌ಗಢದಲ್ಲಿ ಜೀತದಾಳಾಗಿ ದುಡಿಯುತ್ತಿದ್ದ ಬೈಗಾ ಬುಡಕಟ್ಟಿಗೆ ಸೇರಿದ ಮಕ್ಕಳನ್ನು ಇತ್ತೀಚೆಗೆ ರಕ್ಷಿಸಲಾಗಿದೆ.

## ಬೈಗಾ ಬುಡಕಟ್ಟು ಜನಾಂಗದ ಬಗ್ಗೆ:



- ಭೌಗೋಳಿಕ ಹಂಚಿಕೆ: ಬೈಗಾ ಸಮುದಾಯವು ಮಧ್ಯ ಭಾರತದಲ್ಲಿ, ಪ್ರಮುಖವಾಗಿ ಮಧ್ಯಪ್ರದೇಶ ರಾಜ್ಯದಲ್ಲಿ ಕಂಡುಬರುವ ಒಂದು ಜನಾಂಗೀಯ ಗುಂಪಾಗಿದೆ (Ethnic group). ಅಲ್ಲದೆ, ನೆರೆಯ ರಾಜ್ಯಗಳಾದ ಉತ್ತರ ಪ್ರದೇಶ, ಛತ್ತೀಸ್‌ಗಢ ಮತ್ತು ಜಾರ್ಖಂಡ್‌ನಲ್ಲಿಯೂ ಇವರು ಅಲ್ಪಸಂಖ್ಯೆಯಲ್ಲಿ ಕಂಡುಬರುತ್ತಾರೆ.





'ಬೈಗಾ' ಎಂದರೆ "ಮಾಂತ್ರಿಕ-ವೈದ್ಯ" ಎಂದರ್ಥ.



- ಛತ್ತೀಸ್‌ಗಢದಲ್ಲಿರುವ ಬೈಗಾ ಜನಸಂಖ್ಯೆಯು ಕ್ಷೀಣಿಸುತ್ತಿರುವುದರಿಂದ ಮತ್ತು ಅವರಲ್ಲಿ ಸಾಕ್ಷರತಾ ಪ್ರಮಾಣವು ಅತಿ ಕಡಿಮೆಯಿರುವುದರಿಂದ, ಛತ್ತೀಸ್‌ಗಢದ ಸರ್ಕಾರವು ಇವರನ್ನು 'ವಿಶೇಷವಾಗಿ ದುರ್ಬಲವಾದ ಬುಡಕಟ್ಟು ಗುಂಪು' (PVTG) ಎಂದು ವರ್ಗೀಕರಿಸಿದೆ.



- ಇವರು ಸಾಂಪ್ರದಾಯಿಕವಾಗಿ ಸ್ಥಳಾಂತರ ಬೇಸಾಯ'ವನ್ನು ರೂಢಿಸಿಕೊಂಡಿದ್ದು, ಇದನ್ನು ಸ್ಥಳೀಯವಾಗಿ "ಬೇವಾರ್" ಕೃಷಿ ಎಂದು ಕರೆಯಲಾಗುತ್ತದೆ.

## ವಿಶೇಷವಾಗಿ ದುರ್ಬಲವಾದ ಬುಡಕಟ್ಟು ಗುಂಪುಗಳು

- ಪರಿಶಿಷ್ಟ ಪಂಗಡಗಳಲ್ಲಿಯೇ (STs) ಅತ್ಯಂತ ದುರ್ಬಲವಾಗಿರುವ ಮುಖ್ಯವಾಹಿನಿಯಿಂದ ಹೊರಗುಳಿದಿರುವ ತೀವ್ರ ಹಿಂದುಳಿದ ವರ್ಗಗಳನ್ನು 'PVTG'ಗಳು ಎಂದು ಕರೆಯಲಾಗುತ್ತದೆ.

- **ಬುಡಕಟ್ಟು ಗುಂಪನ್ನು 'PVTG' ಎಂದು ಗುರುತಿಸಲು ಪರಿಗಣಿಸುವ ಪ್ರಮುಖ ಮಾನದಂಡಗಳು:**
  - ಪುರಾತನ ಜೀವನಾಧಾರಿತ ಕೃಷಿ ತಂತ್ರಜ್ಞಾನದ ಬಳಕೆ.
  - ಅತ್ಯಂತ ಕಡಿಮೆ ಸಾಕ್ಷರತಾ ಪ್ರಮಾಣ.
  - ತೀವ್ರ ಆರ್ಥಿಕ ಹಿಂದುಳಿದಿರುವಿಕೆ.
  - ಕ್ಷೀಣಿಸುತ್ತಿರುವ ಅಥವಾ ಸ್ಥಗಿತಗೊಂಡಿರುವ ಜನಸಂಖ್ಯೆ.





### 'PVTG'ಗಳ ಇತಿಹಾಸ:

1. 1975 ರಲ್ಲಿ, ಧೇಬರ್ ಆಯೋಗದ ವರದಿಯ ಅನ್ವಯ, ಸರ್ಕಾರವು 'ಪುರಾತನ ಬುಡಕಟ್ಟು ಗುಂಪುಗಳನ್ನು' (PTGs) ಪ್ರತ್ಯೇಕ ವರ್ಗವಾಗಿ ಗುರುತಿಸಿತು ಮತ್ತು 52 ಬುಡಕಟ್ಟು ಗುಂಪುಗಳನ್ನು ಈ ಪಟ್ಟಿಗೆ ಸೇರಿಸಿತು.



2. 2001 ರ ಜನಗಣತಿಯ ಪ್ರಕಾರ, ದೇಶದಲ್ಲಿ 75 ವಿಶೇಷವಾಗಿ ದುರ್ಬಲವಾದ ಬುಡಕಟ್ಟು ಗುಂಪುಗಳಿದ್ದು (PVTGs), ಇವರ ಒಟ್ಟು ಜನಸಂಖ್ಯೆ 27,68,322 ಆಗಿದೆ, ಹಾಗೂ ಇವರು 18 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನೆಲೆಸಿದ್ದಾರೆ.



3. 2006 ರಲ್ಲಿ, PTG ಗಳನ್ನು 'ವಿಶೇಷವಾಗಿ ದುರ್ಬಲವಾದ ಬುಡಕಟ್ಟು ಗುಂಪುಗಳು' (PVTGs) ಎಂದು ಮರುನಾಮಕರಣ ಮಾಡಲಾಯಿತು.



## PVTGS ಗೆ ಸಂಬಂಧಿಸಿದ ಇತ್ತೀಚಿನ ಸರ್ಕಾರಿ ಉಪಕ್ರಮಗಳು:

- PM-PVTG ಅಭಿವೃದ್ಧಿ ಗುರಿ ಯೋಜನೆ : ಸಂಪರ್ಕ, ವಿದ್ಯುತ್, ಸಾರ್ವಜನಿಕ ಶಿಕ್ಷಣ, ಆರೋಗ್ಯ ರಕ್ಷಣೆ, ಕುಡಿಯುವ ನೀರು ಮತ್ತು ರಸ್ತೆ ಸಂಪರ್ಕದಂತಹ ಮೂಲಭೂತ ಸರ್ಕಾರಿ ಸೇವೆಗಳನ್ನು ಎಲ್ಲಾ 22,544 (PVTG) ಹಳ್ಳಿಗಳಿಗೆ ತಲುಪಿಸುವ ದೃಷ್ಟಿಕೋನವನ್ನು ಈ ಯೋಜನೆ ಹೊಂದಿದೆ.









- ಪ್ರಧಾನ ಮಂತ್ರಿ-ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM-JANMAN): ಇದು ಶಾಶ್ವತ ಮನೆಗಳ ನಿರ್ಮಾಣ, ರಸ್ತೆ ಸಂಪರ್ಕ, ಕೊಳವೆ ಮೂಲಕ ಕುಡಿಯುವ ನೀರು ಪೂರೈಕೆ, ಸಮುದಾಯ ನೀರು ಸರಬರಾಜು, ಉಚಿತ ಔಷಧಿಗಳೊಂದಿಗೆ ಸಂಚಾರಿ ವೈದ್ಯಕೀಯ ಘಟಕಗಳು ಸೇರಿದಂತೆ 11 ಪ್ರಮುಖ ನಿರ್ಣಾಯಕ ಮಧ್ಯಸ್ಥಿಕೆಗಳ ಮೇಲೆ ಗಮನ ಹರಿಸಲಿದೆ.





